# ಮೊದಲನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

**ಎಸ್.ಸಿ. 36/2018 ಮತ್ತು ಎಸ್.ಸಿ. 114/2019**

| | | |
|---|---|---|
| ಹೆಸರು | ಪ್ರದೀಪ್ | ಚಾಸಾ ಃ 2 |
| ತಂದೆಯ ಹೆಸರು | ಬಾಲಕೃಷ್ಣ | ಪ್ರಾಸಾ ಃ 2 |
| ವಯಸ್ಸು | 24 ವರ್ಷ | |
| ಉದ್ಯೋಗ | ಕ್ಲೀನರ್ ಕಂ ಡ್ರೈವರ್ | |
| ವಾಸಸ್ಥಳ | ಪುತ್ತೂರು | |

ದಿಃ 09-12-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯವಿಚಾರಣೆ** ಸರ್ಕಾರಿ ಅಭಿಯೋಜಕರವರಿಂದಃ-

2012 ರಿಂದ 2018 ವರೆಗೆ ಮೆಘಾ ಮಾರ್ಕೆಟಿಂಗ್ ನಲ್ಲಿ ನಾನು ವಾಹನ ಸಂಖ್ಯೆ ಕೆಎ-21-6564 ದಲ್ಲಿ ಕ್ಲೀನರ್ ಅಂತ ಕೆಲಸ ಮಾಡುತ್ತಿದ್ದೆ . ಆ ಸಮಯದಲ್ಲಿ ಅಸಾ-1 ವಸಂತ್ ಚಾಲಕನಾಗಿದ್ದ.

ದಿನಾಂಕ 14-06-2016 ರಂದು ಪೂತ್ತೂರಿನ ಇಂಡಸ್ಟ್ರಿ ಯಿಂದ ಜೀರಾ ಮಸಾಲಾ ವನ್ನು ತೆಗೆದುಕೊಂಡು , ಯಡಿಯೂರಿನಲ್ಲಿ 300 ಬಾಕ್ಸ್ ಇಳಿಸಿದೆವು. ನಂತರ ಊಟ ಮಾಡಿ ಮಲಗಿದ್ದು ಬೆಳಗ್ಗೆ ನಾಗರಬಾವಿ ಡಿಪೋ ಕ್ಕೆ ಹೋಗಿ ಅಲ್ಲಿ 100 ಬಾಕ್ಸ್ ಅನ್ ಲೋಡ್ ಮಾಡಿದೆವು. ನಮ್ಮ ಪೂತ್ತೂರಿನ ಮ್ಯಾನೇಜರ್ ಇವರು ನಾಗರಬಾವಿ ಡಿಪೋದವರು ಹಣ ಕೊಡುತ್ತಾರೆ ತೆಗೆದುಕೊಂಡು ಬನ್ನಿರಿ

ಅಂತ ಹೇಳಿದರು. ಆ ಪ್ರಕಾರ ಅಸಾ-1 ವಸಂತ್ ಹಣವನ್ನು ಸಂಗ್ರಹಿಸಿದರು. ಬೆಳಿಗ್ಗೆ 10 ಗಂಟೆಗೆ ನಾವು ನಾಗರಬಾವಿ ಬಿಟ್ಟು ತುಮಕೂರು ಕಡೆಗೆ ಹೋಗುತ್ತಿದ್ದೆವು. ಕುಣಿಗಲ್ ಬೈ ಪಾಸ್ ಗವೀಮಠದ ಹತ್ತಿರ ಬೆಳಿಗ್ಗೆ 11.55 ಗಂಟೆಯ ಸಮಯದಲ್ಲಿ ನಮ್ಮ ವಾಹನ ಹೋಗುತ್ತಿದ್ದಾಗ ಎರಡು ಪಲ್ಸರ್ ವಾಹನಗಳಲ್ಲಿ ಐದು ಜನರು ಬಂದರು. ಅವರು ನಮ್ಮ ವಾಹನಕ್ಕೆ ಅಡ್ಡ ಹಾಕಿದರು. ವಾಹನ ರಿವರ್ಸ್ ಹೊಡಿಯುತ್ತೀರಾ ಅಂತ ನಮ್ಮ ಚಾಲಕನಿಗೆ ಬೈದರು. ಮೂರು ಜನ ಬಂದು ಅಸಾ-1 ಚಾಲಕನ ಕೊರಳ ಪಟ್ಟಿ ಹಿಡಿದು ಎಳೆದಾಡಲು ನೋಡಿದರು. ಆ ಸಮಯದಲ್ಲಿ ಇಬ್ಬರು ನನ್ನ ಕಡೆ ಬಂದರು. ನನ್ನನ್ನು ಗಾಡಿಯಿಂದ ಎಳೆದಾಡಿದರು. ಬಾಕ್ಸ್ ನಲ್ಲಿ ಏನು ಇದೆ ಅಂತ ಕೇಳಿದರು. ಆಗ ನಾನು ಅದರಲ್ಲಿ ಜ್ಯೂಸ್ ಇದೆ ಅಂತ ಹೇಳಿದೆ. ಒಬ್ಬ ವ್ಯಕ್ತಿ ನನಗೆ ಹೆಲ್ಮೆಟ್ ನಲ್ಲಿ ಹೊಡೆಯಲು ಬಂದ. ನಾನು ತಪ್ಪಿಸಿಕೊಳ್ಳಲು ಗಾಡಿಯ ಹಿಂದುಗಡೆ ಓಡಿದೆ. ಕ್ಯಾಬಿನ್ ನಲ್ಲಿದ್ದ ಬಾಕ್ಸ್ ನ್ನು ಸದರಿ ವ್ಯಕ್ತಿಗಳು ತೆಗೆದುಕೊಂಡು ಅವರ ವಾಹನಗಳಲ್ಲಿ ಹೊರಟು ಹೋದರು. ನಮ್ಮ ವಾಹನದ ಕೀಯನ್ನು ತೆಗೆದುಕೊಂಡು ಹೋದರು. ನಮ್ಮ ಕಂಪನಿಯ ಮ್ಯಾನೇಜರ್ ಗೆ ಮತ್ತು ಬೆಂಗಳೂರಿನ ಡಿಪೋ ದ ಮ್ಯಾನೇಜರ್ ಗೆ ನಾನು ಫೋನ್ ಮಾಡಿದೆ. ಕಂಪನಿಯವರು ಪೊಲೀಸರಿಗೆ ದೂರು ಕೊಡುವಂತೆ ಹೇಳಿದ ಮೇರೆಗೆ ನಾವು ಕುಣಿಗಲ್ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟೆವು. ಈ ಘಟನೆ ಅಂದಾಜು 15-20 ನಿಮಿಷ ನಡೆಯಿತು. ಸದರಿ ವ್ಯಕ್ತಿಗಳು ಕನ್ನಡ ಭಾಷೆ ಮಾತನಾಡುವವರಿದ್ದು ಅವರು 25 ರಿಂದ 30 ವರ್ಷದವರು ಇದ್ದರು. ಸದರಿ ವ್ಯಕ್ತಿಗಳು ತಮ್ಮ ದ್ವಿ ಚಕ್ರ ವಾಹನಗಳಿಗೆ ಸಗಣಿ ಬಳದಿದ್ದರು. ಹೀಗಾಗಿ ನಂಬರ್ ಕಾಣಿಸುತ್ತಿರಲಿಲ್ಲ. ಒಂದು ಪಲ್ಸರ್ ವಾಹನ ನೀಲಿ ಕಲರ್ ಇದ್ದು ಇನ್ನೊಂದು ವಾಹನ ಕಪ್ಪು ಬಣ್ಣದ್ದು ಇತ್ತು.

ಮೂರು ತಿಂಗಳು ಆದ ನಂತರ ನಮ್ಮನ್ನು ತುಮಕೂರಿನ ಕಾರಾಗೃಹಕ್ಕೆ ತಹಸೀಲ್ದಾರರು ಕರೆದಿದ್ದರು. ಅಲ್ಲಿ ಹತ್ತು ಜನ ನಿಲ್ಲಿಸಿ ನಮ್ಮನ್ನು ಗುರುತಿಸಲು ಹೇಳಿದರು. ಆಗ ಸಂಜೆ 3 ರಿಂದ 4 ಗಂಟೆ ಆಗಿತ್ತು . ಆಗ ನಾನು ಇಬ್ಬರನ್ನು ಗುರುತಿಸಿದೆ. ಒಬ್ಬನ ಹೆಸರು ಮಂಜುನಾಥ್ ಇದ್ದು ಇನ್ನೊಬ್ಬನ ಹೆಸರು ರುದ್ರಸ್ವಾಮಿ ಇತ್ತು. ಸದರಿ ಆರೋಪಿ ರುದ್ರಸ್ವಾಮಿ ಯನ್ನು ಈಗ ನಾನು ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತಿದ್ದೇನೆ. ಅವನು ಈ ಪ್ರಕರಣದ 1 ನೇ ಆರೋಪಿ ಇರುತ್ತಾನೆ. ಸಾಕ್ಷಿದಾರನು ಮತ್ತೊಬ್ಬ ಆರೋಪಿ ಯನ್ನು ತೋರಿಸಿ ಇವನು ಮಂಜುನಾಥ್ ಇರುತ್ತಾನೆ ಅಂತ ಹೇಳಿದ್ದು , ಸದರಿ ಆರೋಪಿ ಅವನ ಹೆಸರು ಕೇಳಲಾಗಿ ಅವನು ತನ್ನ ಹೆಸರು ಮನು ಇರುತ್ತದೆ ಅಂತ ಹೇಳುತ್ತಿದ್ದಾನೆ. ಅವನು ಈ ಪ್ರಕರಣದ 4 ನೇ ಆರೋಪಿ ಇರುತ್ತಾನೆ. ಉಳಿದ ಆರೋಪಿತರನ್ನು ನನಗೆ ಈಗ ಗುರುತಿಸಲು ಆಗುವುದಿಲ್ಲ ಏಕೆಂದರೆ ಅವರ ಚಹರೆ ಬದಲಾವಣೆ ಆಗಿರುತ್ತದೆ. ತನಿಖಾಧಿಕಾರಿ ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಮಾಡಿಕೊಂಡಿರುತ್ತಾರೆ. ಸದರಿ ದ್ವಿ ಚಕ್ರ ವಾಹನಗಳನ್ನು ನಾನು ಬಣ್ಣದ ಆಧಾರದ ಮೇಲೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ವಾಹನ ನಾನು ನೋಡಿ ಗುರುತಿಸುತ್ತಿದ್ದು ಅದು ಅದೇ ಇದ್ದು ಅದು ಮು.ಮಾ. 1 ರಲ್ಲಿದೆ. ಇನ್ನೊಂದು ವಾಹನದ ಬಗ್ಗೆ ಮೂರು ಫೋಟೋಗಳನ್ನು ನಾನು ನೋಡಿ ಗುರುತಿಸುತ್ತಿದ್ದು , ಆ ಫೋಟೋಗಳಲ್ಲಿ ವಾಹನ ಕಂಡು ಬರುತ್ತಿದ್ದು , ಸದರಿ ಫೋಟೋಗಳನ್ನು ಈಗಾಗಲೇ ನಿಪಿ-6 ರಿಂದ ನಿಪಿ-8 ಎಂದು ಗುರುತಿಸಲಾಗಿದೆ.

(ಸಮಯದ ಅಭಾವದಿಂದ ಸಾಕ್ಷಿಯ ಪಾಟೀಸವಾಲನ್ನು ಮುಂದೂಡಲಾಯಿತು)

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

1ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.